ನೆರೇಗಲ್ಲಿನಲ್ಲಿರುವ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಲೆಕ್ಕ ಪತ್ರ ಕಛೇರಿ

೧೬೭೯ (ಡಿ). ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).— ವಾಣಿಜ್ಯ ಕೈಗಾರಿಕೆ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ಜಿಲ್ಲೆ ರೋಣ ತಾಲ್ಲೂಕಿನ ನರೇಗಲ್ಲಿನಲ್ಲಿ ಮೊದಲು ಇದ್ದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಲೆಕ್ಕ ಪತ್ರ ಕಛೇರಿಯನ್ನು ಯಾವಾಗ ಸ್ಥಳಾಂತರಿಸಲಾಯಿತು ?

ಆ) ಕಛೇರಿಯನ್ನು ಬೇರೆ ಕಡೆಗೆ ಸ್ಥಳಾಂತರಿಸಲು ಕಾರಣಗಳೇನು ?

ಇ) ಪುನಃ ಲೆಕ್ಕ ಪತ್ರ ಕಛೇರಿಯನ್ನು ಪ್ರಾರಂಭಿಸದೇ ಇರುವುದರಿಂದ ವಿದ್ಯುತ್ ಬಳಕೆದಾರರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಮೊದಲು ನರೇಗಲ್ಲಿನಲ್ಲಿದ್ದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಲೆಕ್ಕ ಪತ್ರದ ಕಛೇರಿಯನ್ನು ಪುನಃ ಪ್ರಾರಂಭಿಸಲು ಸರ್ಕಾರದವರು ಕೈಕೊಂಡ ಕ್ರಮಗಳೇನು ?

ಉ) ಈ ಕಛೇರಿಯನ್ನು ಸದರಿ ಸ್ಥಳದಲ್ಲಿ ಯಾವಾಗಿನಿಂದ ಪ್ರಾರಂಭಿಸಲಾಗುವುದು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಾಣಿಜ್ಯ ಮಂತ್ರಿಗಳು).—

ಅ) ನರೇಗಲ್ಲಿನಲ್ಲಿದ್ದ ವಿದ್ಯುತ್ ಮಂಡಳಿಯ ಲೆಕ್ಕ ಪತ್ರ ಶಾಖೆಯನ್ನು ಮೇ ತಿಂಗಳು ೧೯೭೫ ರಲ್ಲಿ ಸ್ಥಳಾಂತರಿಸಲಾಯಿತು.

ಆ) ನರೇಗಲ್ಲಿನಲ್ಲಿ ೩೦೦೦ಕ್ಕೂ ಕಡಿಮೆ ಬಳಕೆದಾರರಿದ್ದ ಲೆಕ್ಕ ಪತ್ರ ಶಾಖೆಯಿರಲು ಬೇಕಾದ ಕನಿಷ್ಠ ಮಿತಿಗಿಂತ ಕಡಿಮೆ ಗ್ರಾಹಕರಿದ್ದುದರಿಂದ ಜಾರಿಗೆ ಬಂದ ವರ್ಕ್‌ಲೋಡ್ ಸೂತ್ರದಂತೆ ಇದನ್ನು ಗಜೇಂದ್ರ ಘಡಕ್ಕೆ ವರ್ಗಾಯಿಸಲಾಯಿತು.

ಇ) ನರೇಗಲ್ಲಿನ ಗ್ರಾಹಕರಿಗೆ ಹಣ ಪಾವತಿ ಮಾಡುವಲ್ಲಿ ತೊಂದರೆ ಆಗದಂತೆ ಮಾಡುವ ಸಲುವಾಗಿ ನರೇಗಲ್ಲಿನಲ್ಲಿ ಪ್ರತಿ ದಿನವೂ ಗ್ರಾಹಕರಿಂದ ಹಣ ಪಡೆಯುವ ವ್ಯವಸ್ಥೆ ಮಾಡಲಾಗಿದೆ. ಇವರ ಖಾತೆಗಳನ್ನು ಹತ್ತಿರದಲ್ಲೇ ಇರುವ ಗಜೇಂದ್ರ ಘಡದಲ್ಲಿ ಇಡಲಾಗಿದೆ.

ಈ) ಉ) } ಇದರ ಬಗ್ಗೆ ಬೇಕಾದ ಮಾಹಿತಿ ಸಂಗ್ರಹಿಸಲಾಗಿದ್ದು ಈ ವಿಷಯ ಮಂಡಳಿಯ ಪರಿಶೀಲನೆ ಯಲ್ಲಿದೆ. ಮಂಡಳಿಯ ಆರ್ಥಿಕ ಪರಿಸ್ಥಿತಿಯನ್ನು ಅನುಸರಿಸಿ ಸೂಕ್ತ ಕ್ರಮ ತೆಗೆದು ಕೊಳ್ಳಲಾಗುವುದು.

ನೀಲಗಿರಿ ಮರದ ಅಪಾಯದ ಬಗ್ಗೆ

೧೫೯೯. ಶ್ರೀ ಕೃಷ್ಣ (ಕೃಷ್ಣರಾಜಪೇಟೆ).— ಮಾನ್ಯ ಅರಣ್ಯ ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನೀಲಗಿರಿ ಮರವು ಅಪಾಯಕಾರಿಯಾಗಿದ್ದು ಅದನ್ನು ಬೆಳೆದರೆ ನೆಲ ಬರಡಾಗಿ ಹೋಗುತ್ತದೆ ಎಂಬ ಶಂಕೆ ರಾಜ್ಯದ ಜನತೆಯಲ್ಲಿ ಅದರಲ್ಲೂ ಮುಖ್ಯವಾಗಿ ರೈತಾಪಿ ಜನಗಳಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಇದರ ಬಗ್ಗೆ ಸರ್ಕಾರವು ಉನ್ನತ ಮಟ್ಟದ ತಜ್ಞರ ಸಮಿತಿಯನ್ನು ನೇಮಕ ಮಾಡಿ ಏತಕ್ಕೆ ಅವರ ಅಭಿಪ್ರಾಯವನ್ನು ಪಡೆಯಬಾರದು ?

ಇ) ಸಾಮಾನ್ಯವಾಗಿ ಎಲ್ಲಾ ಅರಣ್ಯ ಪ್ರದೇಶಗಳಲ್ಲಿ ರಸ್ತೆ ಬದಿಗಳಲ್ಲಿ ನೀಲಗಿರಿ ಮರಗಳನ್ನು ಬೆಳೆಯುವುದು ಕಡಿಮೆ ಮಾಡಿ ಸ್ಥಳೀಯವಾದ ನಮ್ಮ ದೇಶದ ವಾತಾವರಣಕ್ಕೆ ಹೊಂದುವ ಉತ್ತಮ ಜಾತಿಯ ಮರಗಳನ್ನು ಬೆಳೆಸಲು ಸರ್ಕಾರದವರು ಗಮನ ಕೊಡುವರೆ ?

ಈ) ನೀಲಗಿರಿ ಮರ ಬೆಳೆಯಲು ಸಾರ್ವಜನಿಕವಾಗಿ ವಿರೋಧ ಇರುವುದರಿಂದ ಇದನ್ನು ಹಂತ ಹಂತವಾಗಿ ಕಡಿಮೆ ಮಾಡಿಕೊಂಡು ಬರಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೆ ?

ಶ್ರೀ ಜೆ. ಎಸ್. ದೇಶಮುಖ್ (ಆರಣ್ಯ, ಗಣಿ ಹಾಗೂ ಭೂ-ವಿಜ್ಞಾನ ಮಂತ್ರಿಗಳು).—

ಅ) ಹೌದು.

ಆ) ತಜ್ಞರ ಅಭಿಪ್ರಾಯವನ್ನು ಪಡೆಯಲಾಗಿದೆ.

ಇ) ರಸ್ತೆಯ ಬದಿಯಲ್ಲಿ ನೀಲಗಿರಿಯ ಮರ ಕೆಲವು ಕಡೆ ಮಾತ್ರ ನೆಡಲಾಗಿದ್ದು, ಇದರ ಜೊತೆಗೆ ಸ್ಥಳೀಯ ಜಾತಿಯ ಅನೇಕ ವಿಧದ ಮರಗಳನ್ನು ಬೆಳೆಸಲಾಗುತ್ತಿದೆ.

ಈ) ಈ ವಿಷಯವನ್ನು ಸರ್ಕಾರವು ಪರಿಶೀಲಿಸುವುದು.

ಶ್ರೀ ಕೃಷ್ಣ.— ಸ್ವಾಮಿ, ಈ ವಿಚಾರವಾಗಿ ರೈತರಲ್ಲಿ ಬಹಳಷ್ಟು ಭಿನ್ನಾಭಿಪ್ರಾಯ ಇದೆ. ಈ ಕಾರಣ, ಒಂದು ಖಚಿತವಾದ ನೀತಿಯನ್ನು ಸರ್ಕಾರ ಪ್ರಕಟಣೆ ಮಾಡಬೇಕೆಂದು ತಮ್ಮ ಮೂಲಕ ನಾನು ಸಂಬಂಧಪಟ್ಟ ಸಚಿವರನ್ನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಜೆ. ಎಸ್. ದೇಶಮುಖ್.— ಇದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು.— ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಪ್ರಶ್ನೆ ಸಂಖ್ಯೆ ೪೭೨) (೧೬೮೪)
ಶ್ರೀ ಬಿ. ಎಸ್. ಯಡಿಯೂರಪ್ಪ (ಪ್ರಶ್ನೆ ನಂ. ೪೭೩) (೧೮೯೫)
ಶ್ರೀ ಎಂ. ಎಸ್. ಕೃಷ್ಣನ್ (ಪ್ರಶ್ನೆ ಸಂಖ್ಯೆ ೪೭೪) (೧೬೦೩)
ಶ್ರೀ ಶಿವಶೇಖರಪ್ಪಗೌಡ ಶಿರ್ವಾಳ (ಪ್ರಶ್ನೆ ಸಂಖ್ಯೆ ೪೭೫) (೧೧೫೩)
ಶ್ರೀ ಜಿ. ರಾಜಂಗೌಡ (ಪ್ರಶ್ನೆ ಸಂಖ್ಯೆ ೪೭೬ (೯೭೭)
ಶ್ರೀ ಎಸ್. ಜಿ. ನಂಜಯ್ಯಮಠ (ಪ್ರಶ್ನೆ ಸಂಖ್ಯೆ ೪೭೮ (೧೫೫೪)
ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಪ್ರಶ್ನೆ ಸಂಖ್ಯೆ ೪೭೯ (೧೪೪೪)
ಶ್ರೀ ಎಂ. ವರದೇಗೌಡ (ಪ್ರಶ್ನೆ ಸಂಖ್ಯೆ ೪೮೦ (೧೮೨೮)
ಶ್ರೀ ಪಿ. ಸಿ. ಮಂಜಿಸ್ವಾವಯ್ಯ (ಪ್ರಶ್ನೆ ಸಂಖ್ಯೆ ೪೮೧ (೧೭೧೧)
ಶ್ರೀ ಬಿ. ಸ್ವಾಮಿರಾವ್ (ಪ್ರಶ್ನೆ ಸಂಖ್ಯೆ ೪೮೨ (೧೫೨೬)

ಸದಸ್ಯರುಗಳು ಗೈರುಹಾಜರಿ :

ಪಶುವೈದ್ಯ ಶಾಲೆಗಳಲ್ಲಿ ವೈದ್ಯರುಗಳ ಕೊರತೆ

೧೫೩೫. **ಶ್ರೀ ಬಾಬುರೆಡ್ಡಿ** (ಬೀಳಗಿ).— ಮಾನ್ಯ ರೇಷ್ಮೆ ವ್ಯವಸಾಯ, ಹಾಗೂ ಪಶು ಸಂಗೋಪನಾ ಹಾಗೂ ಮುಜ್ರೀದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಪ್ರಸ್ತುತ ಪಶುವೈದ್ಯಕೀಯ ಮಹಾ ವಿದ್ಯಾಲಯಗಳು ಎಷ್ಟು ? ಹಾಗೂ ಅವು ಎಲ್ಲೆಲ್ಲಿ ಇವೆ ?

ಆ) ಈ ಮಹಾವಿದ್ಯಾಲಯಗಳಿಂದ ಪ್ರತಿ ವರ್ಷ ಹೊರಬರುತ್ತಿರುವ ಪದವೀಧರ ವೈದ್ಯರ ಸಂಖ್ಯೆ ಎಷ್ಟು ?

ಇ) ರಾಜ್ಯದಲ್ಲಿ ಒಟ್ಟು ಇರುವ ಗ್ರಾಮಾಂತರ ಪಶುವೈದ್ಯಶಾಲೆಗಳು ಎಷ್ಟು ?

ಈ) ಪಶುವೈದ್ಯಶಾಲೆಗಳಲ್ಲಿ ವೈದ್ಯರುಗಳ ಅಭಾವವಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?